ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸ್ಪೆಷಲ್ ಕೇಸ್ ನಂಃ 59/2010

(ಫ್ರಾಸಾ-33 ಚಾಸಾ-106)
ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು
ದಿಃ 30.08.2024.

| | | |
|---|---|---|
| ಸಾಕ್ಷಿದಾರರ ಹೆಸರು | - | ಮಧುಕರ್ |
| ತಂದೆಯ ಹೆಸರು | - | ಜಯಚಂದ್ರ |
| ವಯಸ್ಸು | - | 43 ವರ್ಷ, |
| ಉದ್ಯೋಗ | - | ಆರಕ್ಷಕ ನಿರೀಕ್ಷಕ, ಆಂತರಿಕ ಭದ್ರತಾ ವಿಭಾಗ, ಬೆಂಗಳೂರು |
| ವಾಸ | - | ಬೆಂಗಳೂರು |

<u>ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ</u>

ನಾನು ದಿಃ12.03.2010 ರಿಂದ ದಿಃ08.09.2012 ವಿಶ್ವನಾಥಪುರ ಪೋಲಿಸ್ ಠಾಣೆಯಲ್ಲಿ ಪೋಲಿಸ್ ಇನ್ಸಪೆಕ್ಟರ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿನಾಂಕ 25.03.2010 ರಂದು ತನಿಖಾಧಿಕಾರಿ ಫ್ರಾಸಾ-28 ಇವರು ವಿಶ್ವನಾಥಪುರ ಪೋಲಿಸ್ ಠಾಣೆಯ ಮೊಕದ್ದಮೆ ಸಂಖ್ಯೆ 10/2010 ಪ್ರಕರಣದಲ್ಲಿ 13 ನೇ ಆರೋಪಿ ಸುರೇಶ ಇವರ ಪತ್ತೆಗಾಗಿ ನನಗೆ ಮೌಖಿಕ ನಿರ್ದೇಶನವನ್ನು ನೀಡಿದ್ದರು.

2. ಅದೇ ದಿನ ಪೋಲಿಸ್ ಸಿಬ್ಬಂದಿಗಳಾದ ಚಾಸಾ-99 ಮತ್ತು 100 ಇವರ ಜೊತೆಗೆ ಚಿಕ್ಕಜಾಲ, ಬೆಟ್ಟಅಲಸೂರು, ಕೋಗಿಲು ಕ್ರಾಸ್, ವಿದ್ಯಾನಗರ ಕ್ರಾಸ್ ಇತ್ಯಾದಿ ಸ್ಥಳಗಳಲ್ಲಿಶೋಧ ಮಾಡಿ ಬಾಗಲೂರು ಗ್ರಾಮದಲ್ಲಿ 13 ನೇ ಆರೋಪಿಯ ಮನೆಯ ಹತ್ತಿರ ಸಂಜೆ 04.30 ಘಂಟೆಗೆ ವಶಕ್ಕೆ ಪಡೆದು ಅದೇ ದಿನ ಸಂಜೆ 05.30 ಘಂಟೆಗೆ ಫ್ರಾಸಾ-28 ಇವರ ಮುಂದೆ 13 ನೇ ಆರೋಪಿಯನ್ನು ಹಾಜರುಪಡಿಸಿ ವರದಿ ನೀಡಿರುತ್ತೇನೆ. ಸಾಕ್ಷಿ ನಿಪಿ-75 ವರದಿಯನ್ನು ನೋಡಿ ಗುರುತಿಸಿ ಅದರಲ್ಲಿರುವ ಸಾಕ್ಷಿ ತನ್ನ ಸಹಿ ನೋಡಿ ಗುರುತಿಸಿದ್ದು ಈಗಾಗಲೇ ನಿಪಿ-75(ಬಿ) ಎಂದು ಗುರ್ತಿಸಲಾಗಿದೆ. 13 ನೇ

ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. (13 ನೇ ಆರೋಪಿತರು ಗೈರು ಹಾಜರಾಗಿದ್ದು ಆರೋಪಿತರ ಪರ ವಕೀಲರು ಹಾಜರಾತಿಗೆ ವಿನಾಯಿತಿ ಅರ್ಜಿ ಸಲ್ಲಿಸಿದ್ದು ಆರೋಪಿತರ ಗುರುತಿಸುವಿಕೆಗಾಗಿ ಯಾವುದೇ ವಿವಾದವಿಲ್ಲ ಎಂದು ನಿವೇದಿಸಿರುತ್ತಾರೆ).

**<u>ಪಾಟೀ ಸವಾಲುಃ 13 ನೇ ಆರೋಪಿ ಪರ ಶ್ರೀ ಕೆಪಿಜೆ ಪರ ಶ್ರೀ ಕೆವಿಕೆ ವಕೀಲರಿಂದಃ</u>**

3. 13 ನೇ ಆರೋಪಿಯ ಶೋಧಕ್ಕಾಗಿ ಹಾಗೂ ಪತ್ತೆಗಾಗಿ ಇಲಾಖಾ ಜೀಪನ್ನು ಉಪಯೋಗಿಸಿದ್ದೆವು. ನಿಪಿ-75 ವರದಿಯಲ್ಲಿ ನಾವು ಆರೋಪಿಯ ಶೋಧಕ್ಕಾಗಿ ಬಳಸಿದ ಇಲಾಖಾ ವಾಹನದ ನೊಂದಣಿ ಸಂಖ್ಯೆ ನಮೂದು ಮಾಡಿರುವುದಿಲ್ಲ. 13 ನೇ ಆರೋಪಿಯ ಗುರುತು ತಮಗೆ ಇತ್ತೋ ಎಂದು ಕೇಳಿದ ಪ್ರಶ್ನೆಗೆ ಆತನ ಗುರುತಿಸುವಿಕೆಗಾಗಿ ಆತನ ಛಾಯಚಿತ್ರವನ್ನು ತೋರಿಸಿದ್ದರು ಮತ್ತು ಶಾರೀರಿಕ ಲಕ್ಷಣಗಳನ್ನು ತಿಳಿಸಿದ್ದರು ಎಂದು ಹೇಳುತ್ತಾರೆ. ಸದರಿ ವಿಚಾರವನ್ನು ನಿಪಿ-75 ವರದಿಯಲ್ಲಿ ನಮೂದು ಮಾಡಿರುವುದಿಲ್ಲ. ಬೇರೆ ಊರುಗಳಿಗೆ ಹೋಗಿ ನಂತರ ಆರೋಪಿಯ ಮನೆಯ ಬಳಿಗೆ ಬರುವ ಬದಲಾಗಿ ನೇರವಾಗಿ ಆರೋಪಿಯ ಮನೆಗೆ ಹೋಗಲು ಏನು ಅಡಚಣೆ ಇತ್ತು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಬೇರೆ ಊರುಗಳಲ್ಲಿ ಇರುವ ಬಾತ್ಮಿದಾರರಿಂದ ಮಾಹಿತಿ ಸಂಗ್ರಹಿಸಿ ಶೋಧ ಮಾಡಿ ಸಿಗದೇ ಇದ್ದುದರಿಂದ ನಂತರ ಆರೋಪಿಯ ಮನೆಯ ಹತ್ತಿರ ಹೋಗಿರುತ್ತೇವೆ ಎಂದು ಹೇಳುತ್ತಾರೆ. 13 ನೇ ಆರೋಪಿಯನ್ನು ನಾನು ಬಾಗಲೂರು ಗ್ರಾಮದ ಅವರ ಮನೆಯ ಬಳಿ ಹೋಗಿ ಪತ್ತೆ ಹಚ್ಚಿರುವುದಿಲ್ಲ ಹಾಗೂ ಆತನನ್ನು ವಶಕ್ಕೆ ಪಡೆದು ಫ್ರಾಸಾ-28 ಇವರ ಮುಂದೆ ಹಾಜರು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಫ್ರಾಸಾ-28 ಇವರ ಕೋರಿಕೆಯ ಮೇರೆಗೆ ತನಿಖೆಗೆ ಅನುಕೂಲವಾಗುವಂತೆ ನಿಪಿ-75 ವರದಿ ನೀಡಿರುತ್ತೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಉಳಿದ ಆರೋಪಿತರ ಪರ ವಕೀಲರಿಂದಃ</u>**

ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

**ಮರುವಿಚಾರಣೆ: ಇಲ್ಲ**

(ಸಾಕ್ಷಿ ಹೇಳಿದಂತೆ ಹೇಳಿಕೆಯನ್ನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಡೀಕರಿಸುತ್ತೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ಕೆ. ಗುರುಪ್ರಸಾದ್)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು